ಒಂದಾಣೆ ಮಾಲೆ **217**

ಚಾಳುಕ್ಯ ವಿಕ್ರಮಾಂಕ

ಮತ್ತು

ಶ್ರೀ ಕೃಷ್ಣದೇವರಾಯ

(ಇಬ್ಬರು ಮಹಾಪುರುಷರ ಕಥೆಗಳು)

❋

ಲೇಖಕ:
ಶ್ರೀ ಕೆ. ವೆಂಕಟರಾಯಾಚಾರ್ಯ, ವಿದ್ವಾನ್,
ಸುರತ್ಕಲ್.

❋

1958

ಬೆಲೆ: ಆಣೆ ಒಂದು.

ಒಂದಾಣೆ ಮಾಲೆ, ಮಂಗಳೂರು.

ಗುಣಹೊಂದಿದ ಕ್ಷಯರೋಗಿಗಳ ಪುನರ್ನಿವೇಶನ

ಕ್ಷಯರೋಗವನ್ನು ಈಗ ಒಂದು ವೈಯಕ್ತಿಕ ಸಮಸ್ಯೆಯಾಗಿ ತಿಳಕೊಳ್ಳದೆ ಸಮಾಜ ಸಮಸ್ಯೆಯಾಗಿ ತಿಳಕೊಳ್ಳಬೇಕಾಗಿದೆ. ರೋಗಿಯು ಕುಟುಂಬದಲ್ಲಿ ಸಂಪಾದಿಸುವ ಸದಸ್ಯ ಇಲ್ಲವೆ ಜೀವನದ ಮುಖ್ಯ ಹೊಣೆಗಾರನೆಂದಾದರೆ ಈ ವಿಚಾರದ ಕಡೆಗೆ ಗಮನಿಸಬೇಕಾದುದು ಅತ್ಯವಶ್ಯ. ಚಿಕಿತ್ಸೆಯ ನಂತರ ರೋಗಿಯು ಹಿಂದೆ ಬರುವಾಗ ಅತ ಅವನ ದೇಹಸ್ಥಿತಿಗೆ ತಕ್ಕುದಾಗಿ ಸಂಪಾದನೆ ಮಾಡುವಂತಾಗಬೇಕು. ಇಲ್ಲದೆ ಹೋದಲ್ಲಿ ರೋಗವು ಮರಳಿಸಿ ಅತ ಇನ್ನಷ್ಟು ಹೊರೆಯಾಗಬಹುದು. ಈ ಉದ್ದೇಶಕ್ಕಾಗಿ ಅವನಿಗೆ ಯಾವುದಾದರೊಂದು ವ್ಯಾಪಾರ ಕಲಿಸಬೇಕಾಗುತ್ತದೆ. ಪುನರ್ನಿವೇಶನ ಕೇಂದ್ರಗಳನ್ನು ಸ್ಥಾಪಿಸುವುದರ ಉದ್ದೇಶ ಇದೇ ಆಗಿರುತ್ತದೆ. ಈ ಕೇಂದ್ರಗಳಲ್ಲಿ ರೋಗಿಯ ಕುಟುಂಬದ ಇತರ ಸದಸ್ಯರಿಗೂ ತರಬೇತಿ ಕೊಡಿಸಿ ತನ್ಮೂಲಕ ಕುಟುಂಬದ ಆರ್ಥಿಕತೆಯನ್ನು ಸಂರಕ್ಷಿಸುವ ವ್ಯವಸ್ಥೆ ಮಾಡಬಹುದಾಗಿದೆ. ಕೆಲವೊಮ್ಮೆ ಅವರಿಗೆ ಅಲ್ಪ ಮಾಸಿಕವೇತನಗಳನ್ನೂ ಕೊಡಬೇಕಾಗುವುದು. ಇದಕ್ಕೆಲ್ಲಾ ಹಣ ಬೇಕು. ನಿಮ್ಮ ಕ್ಷಯರೋಗ ನಿವಾರಣಾ ಸಂಸ್ಥೆಗಳಿಗೆ ಅಂತಹ ಜನರ ಸೇವೆಗೊದಗುವಂತೆ ಸಹಾಯವಿತ್ತು ಸಹಕರಿಸಿರಿ. ಕ್ಷಯರೋಗ ಮುದ್ರೆಗಳನ್ನು ಅಧಿಕಾಂಶ ಸಂಖ್ಯೆಯಲ್ಲಿ ಕೊಂಡುಕೊಂಡು ಆ ಸಂಸ್ಥೆಗಳ ಸಂಪತ್ತನ್ನು ಬಲಪಡಿಸಿರಿ.



ಇವು ಈ ಕೆಳಗೆ
ನಮೂದಿಸಿದ
ಕಡೆಗಳಲ್ಲಿ
ದೊರಕುತ್ತವೆ.



1. ಗೌರವ ಕಾರ್ಯದರ್ಶಿ, ಮುದ್ರೆ ಮಾರಾಟ ಸಮಿತಿ, ಗೋಪಾಲಕೃಷ್ಣ ದೇವಸ್ಥಾನ ರಸ್ತೆ, ಮಂಗಳೂರು.
2. ಜಿಲ್ಲಾ ವೈದ್ಯಾಧಿಕಾರಿ, ಮಡಿಕೇರಿ, ಕೊಡಗು.
3. ಗೌರವ ಕಾರ್ಯದರ್ಶಿ, ಮೈಸೂರು ರಾಜ್ಯ ಕ್ಷಯರೋಗ ಸಂಸ್ಥೆ, ಲೇಡಿ ವಿಲ್ಲಿಂಗ್ಡನ್ ಕ್ಷಯರೋಗ ಚಿಕಿತ್ಸಾಲಯ ಮತ್ತು ಆಸ್ಪತ್ರೆ, ಬೆಂಗಳೂರು ನಗರ ಮತ್ತು ರಾಜ್ಯದಲ್ಲಿರುವ ಇತರ ಏಜನ್ಸಿಗಳು.

ಭಾರತದಲ್ಲಿ ಒಂಭತ್ತನೇ ಕ್ಷಯರೋಗ ಮುದ್ರೆ ಮಾರಾಟ ಚಳವಳ
(ಭಾರತದ ಕ್ಷಯರೋಗ ಸಂಸ್ಥೆ, ನವದೆಹಲಿ ಇವರಿಂದ ಪ್ರೋತ್ಸಾಹಿಸಲ್ಪಟ್ಟುದು.)

ಚಾಲುಕ್ಯ ವಿಕ್ರಮಾಂಕ

ಭಾರತದಲ್ಲಿ ಹಲವು ರಾಜವಂಶಗಳು ಸಂದುವು. ಅವುಗಳಲ್ಲಿ ಶಕ ಪುರುಷರಾಗಿ ಮೆರೆದವರು ಕೆಲವೇ ಮಂದಿ. ಇತಿಹಾಸಪೂರ್ವದಲ್ಲಿ ಯುಧಿಷ್ಠಿರನು ಇದ್ದನು. ಇತಿಹಾಸಯುಗದಲ್ಲಿ ವಿಕ್ರಮಾದಿತ್ಯ, ಶಾಲಿವಾಹನರು ಪ್ರಸಿದ್ಧರಾಗಿದ್ದಾರೆ. ಪಾಶ್ಚಿಮಾತ್ಯ ದೇಶದಲ್ಲಿ ಪ್ರಾರಂಭವಾದ ಕ್ರಿಸ್ತಶಕವೂ ಹಿಜರಿಯೂ ಇಲ್ಲಿ ಬಳಕೆಗೊಂಡಿವೆ. ಪ್ರಾದೇಶಿಕವಾಗಿ ಹುಟ್ಟಿದವುಗಳಲ್ಲಿ ಕೇರಳದ 'ಕೊಲ್ಲಂ', ಕನ್ನಡದ 'ಚಾಳುಕ್ಯ ವಿಕ್ರಮಶಕ'ವೂ ಕೇಳಿಬರುತ್ತಿವೆ.

ಈ ಚಾಳುಕ್ಯ ವಿಕ್ರಮಾಂಕನ ಚರಿತೆಯನ್ನು ಬಿಲ್ಹಣನ ಕಾವ್ಯದಿಂದಲೂ, ಶಿಲಾಶಾಸನಗಳಿಂದಲೂ ತಿಳಿಯಬಹುದು. ಇವನು ಸ್ವಪಟ್ಟಬಂಧದ ವರುಷದಿಂದ ಪ್ರತ್ಯೇಕ ಶಕಮಾನವನ್ನು ನೆಲೆಗೊಳಿಸಿದನು. ಈ ಶಕಪುರುಷನ ವಂಶದವರು ಯಾರೆಂದು ತುಸ ತಿಳಿಯಬೇಕಾದುದು.

ಪ್ರಾರಂಭ: "ಚಾಳುಕ್ಯರ ಮಹಾಪುರುಷರು ಅಯೋಧ್ಯೆಯಲ್ಲಿದ್ದವರು, ಅವರಲ್ಲಿ ವಿಜಯಾದಿತ್ಯನು ದಕ್ಷಿಣಾಪಥಕ್ಕೆ ಬಂದನೆನ್ನುವರು." ಈ ಕತೆ ಹೇಗಿದ್ದರೂ, ಕ್ರಿಸ್ತಾಬ್ದ 5—6ನೆಯ ಶತಕದಿಂದ ಚಾಳುಕ್ಯರ ಹೆಸರು ಚಾರಿತ್ರಿಕವಾಗಿ ಕೇಳುತ್ತಿದೆ. ಮೊದಲ ಪುಲಿಕೇಶಿಯು ವಾತಾಪಿ (ಬಾದಾಮಿ)ಯಲ್ಲಿ ಮೊದಲ ರಾಜನಾದನು. ಇವನು ಅಶ್ವಮೇಧವನ್ನು ಮಾಡಿದ ಉಲ್ಲೇಖವಿದೆ. ಇಮ್ಮಡಿ ಪುಲಿಕೇಶಿಯು ಬಲು ವೀರನು, ಉತ್ತರಾಪಥದ ಹರ್ಷನು ದಂಡೆತ್ತಿ ಬರಲು ತಡೆದನು. ದಕ್ಷಿಣದ ಪಲ್ಲವರನ್ನು ಸೋಲಿಸಿದನು, 'ಪರಮೇಶ್ವರ'ನೆಂದು ಬಿರುದು ಇವನಿಗಿದೆ. ಇವನ ಮಕ್ಕಳು ಬೇರೆಬೇರೆಡೆಗಳಲ್ಲಿ ರಾಜ್ಯಗಳನ್ನು ಕಟ್ಟಿದುದರಿಂದ, ಚಾಳುಕ್ಯ ವಂಶವು ಆಯಾ ರಾಜ್ಯದ ಹೆಸರುಗಳೊಂದಿಗೆ ಕೇಳಿಬರುತ್ತಿದೆ.

ಶಾಖಾವಂಶ: ಪಡುವಣ ಚಾಳುಕ್ಯರ ವಂಶವೂ ಇಂತಹ ಶಾಖೆಗಳಲ್ಲೊಂದಾಗಿದೆ. ಈ ಪೀಳಿಗೆಯವರು ಕಟ್ಟಿದ ರಾಜ್ಯದಿಂದಾಗಿ ಇವರಿಗೆ 'ಕಲ್ಯಾಣ'ದ ಚಾಳುಕ್ಯರೆಂದೂ ಹೇಳುವುದುಂಟು. ಬಾದಾಮಿಯಲ್ಲಿದ್ದ

ಈ ಚಾಳುಕ್ಯರಲ್ಲಿ ತ್ರೈಲಪನು 'ರಾಷ್ಟ್ರಕೂಟ' ವಂಶದವನನ್ನು ಗೆದ್ದು ರಾಜ್ಯವನ್ನು ವಿಸ್ತರಿಸಿದನು. ಇವನ ಮಗ ಸತ್ಯಾಶ್ರಯನು ಗಳಿಸಿದ ವಿಜಯವನ್ನು ಒಳಗೊಂಡು 'ಸಾಹಸ ಭೀಮವಿಜಯ'ವೆಂಬ ಕಾವ್ಯವನ್ನು ಕನ್ನಡ ಕವಿಚಕ್ರವರ್ತಿ ರನ್ನನು ರಚಿಸಿದ್ದನು (10 ಶತಕ).

ಆ ಮೇಲಿನ ಅರಸರಲ್ಲೊಬ್ಬನಾದ ಒಂದನೆಯ ಸೋಮೇಶ್ವರನು 'ಆಹವಮಲ್ಲ, ತ್ರೈಲೋಕ್ಯಮಲ್ಲ'ನೆಂಬ ಬಿರುದುಗಳಿಂದ ಪ್ರಸಿದ್ಧನಾಗಿದ್ದಾನೆ. ಇವನೇ 'ಕಲ್ಯಾಣನಗರ'ವನ್ನು ಕಟ್ಟಿದನೆಂದು ಬಿಲ್ಹಣ, ವಿಜ್ಞಾನೇಶ್ವರ ಮುಂತಾದವರು ಬರೆದಿದ್ದಾರೆ. ಇವನಿಗಿಂತ ಮೊದಲಾಗಿ ಜಯಸಿಂಹನು 'ಕಲ್ಯಾಣನಗರ'ದಲ್ಲಿ ಆಳಿದನೆಂದು ಉಲ್ಲೇಖಗಳಿವೆ. ಈ 'ಕಲ್ಯಾಣ'ದ ವರ್ಣನೆಯಲ್ಲಿ ಒಂದೆರಡು ಮಾತುಗಳನ್ನು ಎತ್ತಿದ್ದೇವೆ:

"ಅಲ್ಲಿನ ಎತ್ತರವಾದ ಮಹಡಿಗಳ ದೀಪಗಳ ಹೊಗೆಯಿಂದಾಗಿ ಆಕಾಶವು ಮುತ್ತಿ ಮಸಕಾಗಿದೆ." "ಕೆರೆಯು ದಡದ ಮರಗಳ ನೆರಳಿಂದ ಕೂಡಿ ಪಾರಿಜಾತದೊಡನೆ ಹುಟ್ಟಿದ ಲಕ್ಷ್ಮಿಯಂತೆಯೂ, ರತ್ನವೆಲ್ಲಾ ಹೀರಿದ ಕಡಲಿನಂತೆಯೂ ಇತ್ತು." "ಹೆಂಗಳ ಕೋಮಲವಾದ ಕಡೆಗಣ್ಣಿನ ನೋಟದಿಂದ ಮನುಷ್ಯರ ಕಲ್ಲುಮನಸ್ಸು ಒಡೆಯುವುದು" ಇತ್ಯಾದಿ ಬಿಲ್ಹಣನು ಸೋಜಿಗವಾಗಿ ವರ್ಣಿಸಿದ್ದಾನೆ. "ನಾಸೀದಸ್ತಿ ಭವಿಷ್ಯತಿ ಕ್ಷಿತಿತಲೇ ಕಲ್ಯಾಣಕಲ್ಪಂ ಪುರಂ" ಎಂದು ಬೇರೊಬ್ಬನೆಂದನು!

ಹುಟ್ಟು: ಆಹವಮಲ್ಲನಿಗೆ ಇಬ್ಬರು ರಾಣಿಯರಿದ್ದರು. ಒಬ್ಬಳು ಗಂಗರಾಜಪುತ್ರಿ ಮೈಳಾಲದೇವಿ, ಇನ್ನೊಬ್ಬಳು ಪಲ್ಲವರಾಜ ಪುತ್ರಿಯರೆಂದು ಹೆಸರುಗೊಂಡವರು. ಇವರಿಗೆ ಮಕ್ಕಳಿಲ್ಲದ ಕಾರಣ, ರಾಜನು ಈಶ್ವರನ ತಪಸ್ಸೇವೆಯನ್ನು ಕೈಗೊಂಡನು. ಒಮ್ಮೆ ಪ್ರಾತಃಕಾಲದ ಪೂಜೆಯ ವೇಳೆಯಲ್ಲಿ 'ಆಕಾಶವಾಣಿ'ಯು ಕೇಳಿತು—ನಿನ್ನ ಕರ್ಮಾನುಸಾರವಾಗಿ ಅನೇಕ ಮಕ್ಕಳು ಹುಟ್ಟುವರು. ಅವರಲ್ಲಿ ಎರಡನೆಯವನು ಈಶ್ವರನ ಅನುಗ್ರಹದಿಂದ ವಿಶೇಷಾಂಶವುಳ್ಳವನಾಗುವನು—ಎಂದು.

ಆ ಮೇರೆಗೆ ರಾಜನು ಸಂತುಷ್ಟನಾಗಿ ರಾಜ್ಯಭಾರವನ್ನು ಮಾಡತೊಡಗಿದನು. ಮೊದಲ ಮಗನು ಇಮ್ಮಡಿ ಸೋಮೇಶ್ವರನೆಂದು, ಎರಡನೆಯವನು ವಿಕ್ರಮಾಂಕನೆಂದು, ಮೂರನೆಯವನು ಜಯಸಿಂಹನೆಂದು, ಕಾವ್ಯದಲ್ಲಿ ಕಾಣುವುದು. ನಾಲ್ಕನೆಯ ಮಗನು ವಿಜಯಾದಿತ್ಯನೆಂದು

ಶಿಲಾಲೇಖಗಳಿಂದ ತಿಳಿಯುವುದು. ಈ ವಿಕ್ರಮಾಂಕನು ಈ ವಂಶದಲ್ಲಿ ಆರನೆಯ ವಿಕ್ರಮಾದಿತ್ಯನೆಂದು ಹೆಸರುಗೊಂಡನು.

ಬಾಲ್ಯ: ಇವನ ಬಾಲಲೀಲೆಗಳನ್ನು ಕವಿಯು ಬಹಳ ವಿಸ್ತಾರವಾಗಿ ಬಣ್ಣಿಸಿದ್ದಾನೆ. ಅಲ್ಲಿಯ ಕೆಲವು ಮಾತುಗಳು ಹೀಗಿವೆ:

"ವಿಕ್ರಮದಿಂದ ರಾಜ್ಯಲಕ್ಷ್ಮಿಯೆಂಬಂತೆ ಈತನಿಂದ ತಾಯಿಯು ಶೋಭಿಸುತ್ತಿದ್ದಳು." "ಮಗುವು ವಿವಿಧ ಲೀಲೆಗಳೆಂಬ ಕುಸುಮಗಳ ನಂದನದಂತೆ ಇದ್ದನು." "ಇವನ ಕುತ್ತಿಗೆಯಲ್ಲಿ ಹುಲಿಯುಗುರು ಕಾಣು ತ್ತಿತ್ತು." "ಇವನು ಪಂಜರದ ಸಿಂಹಗಳನ್ನು ಸೆಳೆಯುತ್ತಾ, ಮುಂದೆ ಶತ್ರುಗಳೆಂಬ ಆನೆಗಳನ್ನು ಗೆಲ್ಲಲು ಇವುಗಳ ವಿಕ್ರಮವನ್ನು ಕೊಳ್ಳುವಂತಿದ್ದನು." "ಮಗುವು ಬಳೆದು ವಿದ್ಯಾಭ್ಯಾಸದಲ್ಲಿ ಎಲ್ಲರಿಗಿಂತ ಮೇಲ್ಮೆವಡೆದಿದ್ದನು. ಅಂತಹ ಮಹಾತ್ಮರಿಗೆ ಗುರುಗಳು ನಿಮಿತ್ತಮಾತ್ರ ಇರುವುದು." "ಶೀಜೋಧನರ ಮೇಲಾಳುವಾದ ಇವನ ಮಣಿಮಯವಾದ ಪಾದಪೀಠದಲ್ಲಿ ಕಿರೀಟರತ್ನವು ಸಂಕ್ರಾಂತವಾಗಿ ಕ್ಷಮೆಯನ್ನು ಬೇಡುವಂತೆ ಹೊರಳುತ್ತಿತ್ತು." ವಿಕ್ರಮಾದಿತ್ಯನು ಗುಣರೂಪಾದಿಗಳಿಂದ ಉತ್ತಮನಾಗಿದ್ದನೆಂದು ಹೇಳಲಡ್ಡಿಯಿಲ್ಲ.

ಸಂಭಾಷಣೆ: ಒಮ್ಮೆ ತಂದೆಯಾದ ಸೋಮೇಶ್ವರನು ಹೀಗೆ ಯೋಚಿಸಿದನು: "ಈ ಅದ್ಭುತಸಾಹಸಾಂಕನು ಪಟ್ಟವೇರಿದರೆ ಅದಾರು ಪ್ರತಿಭಟಿಸಬಲ್ಲನು? ತಾನು ರಾಜನಾಗಿದ್ದರೂ, ಈತನನ್ನು ಯುವರಾಜನನ್ನಾಗಿ ಮಾಡುವೆನು; ರಾಜ್ಯಲಕ್ಷ್ಮಿಯು ಉಭಯತಟದ 'ವಾಹಿನಿ'ಯಂತೆ ಹರಿಯಲಿ." ಹಾಗೆಯೇ ವಿಕ್ರಮಾಂಕನನ್ನು ಕರೆದು ತನ್ನ ಯೋಚನೆಯನ್ನು ತಿಳುಹಿದನು. ಈ ಬಗೆಗೆ ಅವರೊಳಗೆ ಸಂವಾದ ನಡೆಯಿತು:

ವಿಕ್ರಮಾಂಕ: "ಅಣ್ಣನಿರುವಾಗ ತಮ್ಮನು ಯುವರಾಜರಾಗಲು ಅಧಿಕಾರವಿಲ್ಲ. ಈ ಕುಲಮರ್ಯಾದೆಯನ್ನು ಮೀರಿದರೆ, ಕಲಂಕ ಹಚ್ಚಿದಂತಾಗುವುದು. ನೀವು ರಾಜರಾಗಿರಿ, ಅಣ್ಣನು ಯುವರಾಜನಾಗಲಿ, ನಿಮ್ಮಿಬ್ಬರ ಆಜ್ಞೆಯನ್ನು ನಾನು ವಹಿಸುವೆನು. ದಶರಥನು 'ಸ್ತ್ರೀಜಿತ' ಅಕ್ರಮದಲ್ಲಿದ್ದು ಅಪವಾದ ಕೇಳಲಿಲ್ಲವೇ?"

ಸೋಮೇಶ್ವರ: "ಸಂಪತ್ತು ಯಾರ ಮನಸ್ಸನ್ನು ಕದಡದು? (ಎಂದುಕೊಂಡು, ಪ್ರಕಟವಾಗಿ) ನೀನಲ್ಲದೆ ಬೇರೆ ಯಾರಲ್ಲೂ ಇಂತಹ

ಮಾತು ಹೊರಡದು, ಪಾರಿಜಾತವಲ್ಲದೆ ಬೇರೆ ಹೂಗಳು ಸವಿಜೇನನ್ನು ಕೊಡಲಾರವು. ದೈವ, ದೈವಜ್ಞರ ಮಾತಿನಂತೆ ನೀನೇ ರಾಜನಾಗ ಬೇಕು!”

ವಿಕ್ರಮಾಂಕ: “ಆದಾರ ಮಾತೂ ಇರಲಿ. ಅಣ್ಣನ ಬೆಂಬಲವಾಗಿ ನಾನಿರುವೆನು. ಅವನೇ ಯುವರಾಜನಾಗಲಿ (ಎಂದು ತನ್ನ ನಿರ್ಧಾರ ವನ್ನು ನಿವೇದಿಸಿದನು).”

ರಾಜನು ಉಪಾಯಾಂತರವಿಲ್ಲದೆ ಹಿರಿಯ ಮಗನಿಗೇನೇ ‘ಯುವ ರಾಜ’ ಪಟ್ಟವನ್ನು ಮಾಡಿದನು. ತಂದೆ ಅಣ್ಣಂದಿರ ಪಾಲಿನ ರಾಜ್ಯ ಕಾರ್ಯಭಾರಗಳನ್ನು ವಿಕ್ರಮಾಂಕನೇ ಹೊತ್ತಿದ್ದನು, ಆದಿಕೂರ್ಮನು ಭೂಮಿ ಮತ್ತು ಶೇಷರ ಭಾರವನ್ನು ಹೊರುವಂತೆ ಇದ್ದನು. ವಿಕ್ರಮಾ ದಿತ್ಯನು ಜೈತ್ರಯಾತ್ರೆಗೆ ಸನ್ನದ್ಧನಾದನು. ಗೌಡ, ಕಾಮರೂಪ, ಮಾಲವ, ಚೋಲ, ದ್ರವಿಡ ಮೊದಲಾದ ರಾಜರನ್ನು ಗೆದ್ದನು. ಅವರಲ್ಲಿ ಹಲವರು ಕನ್ಯಾದಾನದೊಂದಿಗೆ ತಮ್ಮ ಸರ್ವಸ್ವದಾನವನ್ನೂ ಒಪ್ಪಿಸಿಕೊಂಡರು.

ವಿಕ್ರಮಾಂಕನು ಕಾಂಚೀಪ್ರಯಾಣದಲ್ಲಿರುವಾಗ ತಂದೆಯಾದ ಸೋಮೇಶ್ವರನು ‘ದಾಹಜ್ವರ’ದಿಂದ ತೀರಿದನು. ಅಣ್ಣನಾದ ಸೋಮೇಶ್ವ ರನು ಪ್ರಜೆಗಳ ಅಹಿತವನ್ನೇ ಮಾಡಹತ್ತಿದ್ದನು. ಇದನ್ನು ಚಾರನಿಂದ ತಿಳಿದ ವಿಕ್ರಮನು ಬಹಳ ಖಿನ್ನನಾದನು. ಅಲ್ಲಿಂದ ಕೂಡಲೇ ಹೊರಟು ‘ದಕ್ಷಿಣಗಂಗೆ’ಯಾದ ತುಂಗಭದ್ರೆಯ ತಡಿಗೆ ಬಂದು, ‘ಚಂಡೀಶ’ನನ್ನು ಸೇವಿಸುತ್ತಿದ್ದನು. ತಂದೆಗಾಗಿ ಶ್ರಾದ್ಧ ಕ್ರಿಯೆಗಳನ್ನು ಮಾಡಿದನು. ಕೆಲವು ದಿನಗಳ ಬಳಿಕ ರಾಜ್ಯಕ್ಕೆ ಹೋದನು.

ಅಣ್ಣನ ರೀತಿ: ಸೋಮೇಶ್ವರನಿಗೆ ರಾಜ್ಯಸಂಪತ್ತು ಸುರೆಯಂತೆ ಮದವನ್ನು ಕೊಡುತ್ತಿತ್ತು. ಅವನು ಹಿರಿಯರ ಉಪದೇಶಗಳನ್ನು ಕೇಳದೆ ಸ್ವೇಚ್ಛಾಚಾರಿಯಾಗಿದ್ದನು. ತಮ್ಮನ ಹಿತವಾದಗಳನ್ನು ಅಲ್ಲಗಳೆದನು. ಹೆಚ್ಚೇನು? ತಮ್ಮನ ಕೊಲೆಗೂ ಪಿತೂರಿ ನಡೆಸಿದನು. ವಿಕ್ರಮಾಂಕನು ಸಂಯಮದಿಂದ ಕೂಡಿದ್ದನು. ಅಣ್ಣನ ಸಂಗಡ ಸಂಗವಿರಬಾರದೆಂದು ನಿಶ್ಚಯಿಸಿ, ತಮ್ಮನನ್ನು ಕೂಡಿಕೊಂಡು ರಾಜ್ಯದಿಂದ ಹೊರಟನು. “ಬಿಲ್ಲು ಡಿದ ನಾರಿನಂತೆ, ಮುತ್ತು ಕದಲಿದ ಚಿಪ್ಪಿನಂತೆ, ಮಧುರತೆಯಿಲ್ಲದ ಕವಿತೆ ಯಂತೆ, ವಿಕ್ರಮನಿಲ್ಲದ ರಾಜ್ಯ ಕಳೆಗುಂದಿತ್ತು.”

ಆದಾಗ ಹಿರಿಯಣ್ಣನು ಈ ತಮ್ಮಂದಿರನ್ನು ಸೈನ್ಯದಿಂದ ತಡೆಗಟ್ಟಿದನು. ವಿಕ್ರಮಾದಿತ್ಯನು ಅಣ್ಣನನ್ನು 'ಏಕಾಂಗಿ'ಯಾಗಿ ಮಾಡಿಬಿಟ್ಟನು. ಆ ಮೇಲೆ ಕೊಂಕಣ, ಅಲುಪ, ಕೇರಳ ರಾಜ್ಯಗಳನ್ನು ದಾಟು; ದ್ರಾವಿಡ ದೇಶಕ್ಕೆ ಮುನ್ನಡೆದನು. ಅಲ್ಲಿ ಹೋರಾಡುವ ಮುಂಚಿತವಾಗಿ ರಾಜದೂತನ ಸಂಧಾನವಾದುದು. ಆ ವೇಳೆಗೆ ವಿಕ್ರಮನು ತುಂಗೆಯ ತಡಿಗೆ ಬಂದು ತಂಗಿದನು, ಅಲ್ಲಿಗೆ ದ್ರವಿಡರಾಜನು ಬಂದನು. ಅವರಿಬ್ಬರಿಗೆ 'ಗುರು–ಪುಷ್ಯ'ಗಳಂತೆ ಸಮಾಗಮವಾದುದು. ವಿಕ್ರಮನು 'ಅರ್ಧಾಸನ'ದ ದಾನದಿಂದ ಆತನನ್ನು ಸತ್ಕರಿಸಿದನು. ಆ ಚೋಳರಾಜನಾದರೋ 'ಕನ್ಯಾದಾನ'ದಿಂದ ವಿಕ್ರಮನನ್ನು ಪ್ರತಿಸತ್ಕಾರ ಮಾಡಿದನು. ಈಕೆ 'ಹಿರಿಯರಸಿ ಲಕ್ಷ್ಮೀದೇವಿ'ಯೆಂದು ಶಿಲಾಲಿಪಿಗಳಲ್ಲಿ ಹೆಸರುಗೊಂಡವಳಿರಬಹುದು.

ವಿಕ್ರಮಾದಿತ್ಯನು ಅಲ್ಲಿದ್ದಾಗ ರಾಜಿಗನೆಂಬ ರಾಜನು ಎರಡನೆಯ ಸೋಮೇಶ್ವರನ ಪ್ರೇರಣೆಯಂತೆ ವಿಕ್ರಮನನ್ನು ಇದಿರಿಸಿದನು, ಸೋಮೇಶ್ವರನೂ ಸಜ್ಜಾಗಿ ಬಂದು ಹಿಂಗಡೆಯಿಂದ ಮುತ್ತಿದನು. ವಿಕ್ರಮಾಂಕನು ಅದೆಷ್ಟು ಸಂಧಾನಗಳನ್ನು ಮಾಡಿಸಿದರೂ ಪ್ರಯೋಜನವಾಗಲಿಲ್ಲ. 'ತಾನೇ ರಾಜ್ಯದಿಂದ ದೂರಹೋಗುವೆ'ನೆಂದು ಬಯಸಿದ ವಿಕ್ರಮನು 'ಈಶ್ವರಾಜ್ಞೆ'ಯಿಂದ ಅವರೆಲ್ಲರನ್ನೂ ಚದರಿಸಿದನು, ಅಣ್ಣನನ್ನು ಸೆರೆಹಿಡಿದನು. ಆ ಮೇಲೆ ಕಲ್ಯಾಣದಲ್ಲಿ ವಿಕ್ರಮಾದಿತ್ಯನು ರಾಜನಾದನು. ಕಿರಿಯನಾದ ಜಯಸಿಂಹನನ್ನು ವನವಾಸಿ(ಬನವಾಸಿ)ಯಲ್ಲಿರಿಸಿದನು.

ರಾಜ್ಯಭಾರ: ವಿಕ್ರಮನು ಪ್ರಜೆಗಳ ಹಿತವನ್ನು ಬಯಸಿ ರಾಜ್ಯವನ್ನು ಆಳುತ್ತಿದ್ದನು, ತಾನು ಆನಂದಗೊಳ್ಳುತ್ತಿದ್ದನು. ಇವನ ಆಡಳಿತದ ಬಗೆಗೆ ಒಂದೆರಡು ಮಾತು ಬರೆದರೆ ಹೆಚ್ಚಾಗದು: "ಆಗ ಪ್ರಜೆಗಳಿಗೆ 'ದೈವಿಕ' ಮತ್ತು 'ಮಾನುಷಿಕ'ವಾದ ಬಾಧೆಯಿದ್ದಿಲ್ಲ. ಜನರು ರಾತ್ರಿಯಲ್ಲೂ ನಿರ್ಭಯದಿಂದ ಬಾಗಿಲು ತೆರೆದಿಟ್ಟು ನಿದ್ರಿಸುತ್ತಿದ್ದರು. ಎಲ್ಲೆಡೆ ಸಂತಸದ ಉತ್ಸವವಿದ್ದಿತ್ತು." ಇವನು ಸುಮಾರು ಅಯ್ವತ್ತು ವರುಷಗಳಷ್ಟು ರಾಜ್ಯಭಾರ ವಹಿಸಿದ್ದನು. (ಇಸ್ವಿ 1076—1127.)

ಸ್ವಯಂವರ: ಇವನು ಯುದ್ಧದಲ್ಲಿ ಮಾತ್ರವಲ್ಲ, ಸೌಂದರ್ಯದಲ್ಲೂ ಮಿಗಿಲಾಗಿದ್ದನೆಂಬುದಕ್ಕೆ ಒಂದು ಉದಾಹರಣೆಯನ್ನು ಕೊಡ

ಬಹುದು: ಕರಹಾಟದ ರಾಜನ ಪುತ್ರಿಯಾದ ಚಂದ್ರಲೇಖೆ (ಚಂದಲೆ) ಪ್ರಾಯತುಂಬಿದ್ದಳು. ಅವಳ ತಂದೆ 'ಸ್ವಯಂವರ'ವನ್ನು ನಿಶ್ಚಯಿಸಿದನು. ಅಲ್ಲಿಗೆ ವಿಕ್ರಮಾದಿತ್ಯನೂ ಹೋಗಿದ್ದನು. "ಇವನ ಆಗಮನದಿಂದ ಕರಹಾಟದ ರಾಜನು ನಿಧಿಯನ್ನು ಪಡೆದವನಂತೆ ಸಂತಸಗೊಂಡನು; ಯೋಗ್ಯ ಅಳಿಯನು ದೊರಕುವಷ್ಟು ಸುಖಾಸ್ಪದವು 'ಕನ್ಯಾಪಿತೃ'ಗಳಿಗೆ ಬೇರೊಂದಿಲ್ಲ!" ವಿದ್ಯೆ, ರೂಪ, ಗುಣಗಳಿಂದ ತುಂಬಿ ಸರ್ವಾಂಗಸುಂದರಿಯಾದ ಚಂಚಲೆಯು ಅಲಂಕೃತಳಾಗಿ ಪರಿವಾರದೊಂದಿಗೆ ಸ್ವಯಂವರಮಂಟಪಕ್ಕೆ ಬಂದಳು. ಅಲ್ಲಿ ನೆರೆದ ಕುಂತಲ, ಅಯೋಧ್ಯೆ, ಚೇದಿ, ಕಾನ್ಯಕುಬ್ಜ, ಕಾಲಿಂಜರ, ಗೋಪಾಚಲ, ಮಾಲವ, ಗುರ್ಜರ, ಪಾಂಡ್ಯ, ಚೋಳ ರಾಜರನ್ನು ಬಿಟ್ಟು ಚಂದಲೆ ಮುಂದೆ ಸಾಗಿದಳು. ವಿಕ್ರಮಾದಿತ್ಯನು ಕುಳಿತಲ್ಲಿಗೆ ಸಾರಿ, ಮಾಲೆಯಿಕ್ಕಿದಳು. "ರಾಜಹಂಸಿಯು ನೀರೊಡನೆ ಬೆರಸಿದ್ದ ಹಾಲನ್ನು ಮಾತ್ರ ಕೊಳ್ಳುವಂತೆ, ಆಕೆ ರಾಜರ ಮಧ್ಯದಲ್ಲಿ ಈತನನ್ನು ವರಿಸಿದಳು. ತುಂಬಿಯು ಪಾವಸೆಗಳನ್ನು ಬಿಟ್ಟು ತಾವರೆಯನ್ನು ಹೊಗುವಂತೆ ಇವನಲ್ಲಿ ಆಕೆಯ ನೋಟ ಸೇರಿಕೊಂಡಿತು." ಅವರಿಬ್ಬರ ವಿವಾಹವು ಕ್ರಮದಿಂದ ನೆರವೇರಿತು. ಈ ಸಮಾರಂಭದಲ್ಲಿಯೂ ಬಾಗಿಲಲ್ಲಿ ತಡೆದು ನಿಂತಿದ್ದ ಅಣ್ಣನಾದ ಇಮ್ಮಡಿ ಸೋಮೇಶ್ವರಾದಿಯರನ್ನು ವಿಕ್ರಮನು ಗೆದ್ದು ಕಲ್ಯಾಣಕ್ಕೆ ಬಂದನು. ಈ ಚಂದಲದೇವಿ 'ಶ್ರೀಮದಭಿನವ ಸರಸ್ವತಿ'ಯೆಂದು ಹೊಗಳಿಕೆಗೆ ಪಾತ್ರಳಾಗಿದ್ದಳು. ವಿಕ್ರಮಾದಿತ್ಯನ ಈರ್ವರು ಹೆಂಡಿರು ನಾಡುಗಳನ್ನು ಆಳಿದರೆಂದು ಶಿಲಾಲಿಪಿಗಳಿಂದ ತಿಳಿಯುವುದು.

ತಮ್ಮನ ರೀತಿ: ಒಮ್ಮೆ ಬನವಾಸಿಯಲ್ಲಿದ್ದ ಜಯಸಿಂಹನು ಉದ್ಧತನಾಗಿ ದ್ರವಿಡಾಧಿಪನೊಡನೆ ಸೇರಿ, ಅಣ್ಣನಲ್ಲಿ ಸೆಣಸಾಡಲು ಕೃಷ್ಣವೇಣೀ ದಡಕ್ಕೆ ಸಾಗಿಬಂದನು. ಅಲ್ಲಿ ಪ್ರಜೆಗಳಿಗೆ ಬಹಳ ತೊಂದರೆಗಳನ್ನು ಮಾಡಿದನು. ವಿಕ್ರಮನು ಅನೇಕ ರೀತಿಯಲ್ಲಿ ನೀತಿ ಹೇಳಿದರೂ ಕೇಳಲಿಲ್ಲ. ಇವರಿಬ್ಬರು ಭಯಂಕರವಾದ ಯುದ್ಧವನ್ನು ಮಾಡಿದರು. ವಿಕ್ರಮಾದಿತ್ಯನೇ ಕೊನೆಗೆ ಗೆದ್ದು, ಶತ್ರುಗಳ ಸಕಲ ಸಂಪತ್ತನ್ನೊಳಗೊಂಡು, 'ಹೆಣ್ಣಾನೆ'ಯ ಬೆನ್ನಮೇಲೇರಿ, ರಾಜಧಾನಿಗೆ ಬಂದನು.

ಇವನಿಗೆ ಅನೇಕ ಮಕ್ಕಳು ಹುಟ್ಟಿದ್ದರು. ಮಗಳಾದ ಮೈಳಾಲ್ಲದೇವಿಯನ್ನು ಕಾದಂಬ ಜಯಕೇಶಿಯು ಮದುವೆಯಾಗಿದ್ದನು. ಒಬ್ಬ

ಮಗನು ಚಿಕ್ಕಂದಿನಲ್ಲೇ ತೀರಿದುದರಿಂದ ಉಳಿದವನಾದ ಮೂರನೆಯ ಸೋಮೇಶ್ವರನು ತಂದೆಯ ಪಟ್ಟಕ್ಕೆ ಬಂದನು. ಈ ಸೋಮೇಶ್ವರನು 'ಮಾನಸೋಲ್ಲಾಸ'ವೆಂಬ ಹೆಸರಿನ 'ವಿಶ್ವಕೋಶ'ದಂತಿದ್ದ ಗ್ರಂಥವನ್ನು ರಚಿಸಿ ಪ್ರಖ್ಯಾತನಾದನು.

ವ್ಯಕ್ತಿವರ್ಣನೆ: ಚಾಳುಕ್ಯ ವಿಕ್ರಮಾಂಕನ ಹೆಸರನ್ನು ಕನ್ನಡಿಗರು ಎಂದೂ ಮರೆಯಲಾರರು. ಇವನ ಕಾಲದ ಶಿಲಾಶಾಸನದ ಪದ್ಯಗಳೆರಡು ಮೂರನ್ನು ಮಾದರಿಗಾಗಿ ಎತ್ತಿ ಬರೆಯುವೆವು:

"ಸೇತು ಹಿಮಾದ್ರಿಯನೊಳಗಣ ।
ಭೂತಳದೊಳ್ನೆಗಳ್ದ ಶಾತ್ರವಕ್ಷತ್ರಿಯರಂ ।
ಸಾತಾಸಿಯಿಂದೆ ತವಿಸಿ ಮ ।
ಹೀತಳಮಂ ವಿಕ್ರಮಾಂಕನಾಳುತ್ತಮಿರಲ್ ॥
ಅಡಿಗೆರಗಿ ಪಮ್ಮುಪಾರ್ಜಿಸಿ ।
ದೊಡವೊಗಳಂ ತಂದು ಕೊಟ್ಟು ಶರಣಾರ್ಥಿಗಳಾ ।
ದಡೆ ಬಾಳ್ವರಹಿತವರ್ಗಂ ।
ತೊಡದರ್ಗಳವರಿ ಮುಳಿಯೆ ವಿಕ್ರಮಾದಿತ್ಯನೃಪಂ ॥"

[ಕುರ್ತಕೋಟಿ. ಇ. 1087)

"ತ್ರಿಭುವನವರ್ತಿಕೀರ್ತಿ ಸುಭಲಕ್ಷಣಲಕ್ಷಿತಭದ್ರಮೂರ್ತಿ ದೋ ।
ರ್ವಿಭವವಿನಿರ್ಜಿತಾರಿ ದುರಘಬ್ರಜಹಾರಿಯುವಂ ದಿಟಂ ಜಗ ।
ಕ್ಕಭಿನವಚಕ್ರಿಯೆಂದಭಿಜನಂ ಪೊಗಳುತ್ತಿರೆ ಮೆಚ್ಚಿ ಬಿಚ್ಚತಂ ।
ತ್ರಿಭುವನಮಲ್ಲ ಚಕ್ರಿ ಪರಿಪಾಳಿಸುತಿರ್ದ್ದನಶೇಷಧಾತ್ರಿಯಂ ॥"

(ಕಜ್ವ. ಇ. 1105)

ಶ್ರೀ ಕೃಷ್ಣದೇವರಾಯ

ಕನ್ನಡದ ಜನಾಂಗವು ಧಾರ್ಮಿಕ ರಾಜಕೀಯಗಳೆಂಬ ಎರಡು ತೆರದ ಮಾರ್ಗದಲ್ಲೂ ಹೆಸರು ಗಳಿಸಿದೆ. ಕದಂಬ, ಗಂಗ, ಚಳುಕ್ಯ, ರಾಷ್ಟ್ರಕೂಟ, ಹೊಯ್ಸಳ ಮನೆತನಗಳಲ್ಲಿ ಹುಟ್ಟಿದ ಕೆಲವು ರಾಜರ್ಷಿಗಳು ಇತಿಹಾಸ ಗ್ರಂಥಗಳಲ್ಲಿ ಕಂಗೊಳಿಸುತ್ತಿದ್ದಾರೆ.

ವಿಜಯನಗರವು ಅಂತಹ ರಾಜ್ಯವೊಂದು. ಇದು ಮೂರು ಮನೆತನಗಳ ಆಡಳಿತದಲ್ಲಿ ಸಾಗಿದುದು ಅದೊಂದು ವಿಚಿತ್ರವಾಗಿದೆ. ಸಂಗಮ, ಸಾಳುವ, ತುಳುವ ವಂಶಗಳ ರಾಜರು ಸುಮಾರು 230 ವರ್ಷಗಳಲ್ಲಿ ವಿಜಯನಗರವನ್ನು ಆಳಿದರು. ಹೀಗೆ ಮೂರು ಮನೆತನಗಳಲ್ಲಿ ರಾಜ್ಯದ ಆಡಳಿತ ಹರಿದು ಬರಲು ಮುಖ್ಯವಾಗಿ ಎರಡು ಕಾರಣಗಳಿವೆ: ರಾಜಸಂಬಂಧಿಕರಲ್ಲಿ ಅಂತಃಕಲಹವೊಂದು. ಇದರಿಂದ ಪ್ರತಿಯೊಂದು ವಂಶದ ಮೂರು ನಾಲ್ಕು ಮಂದಿಯೊಳಗೆ ರಾಜ್ಯನಿರ್ವಹಣವಾಗಿ ಹಸ್ತಾಂತರವಾಯಿತು. ಇನ್ನೊಂದಾಗಿ ಪರರಾಜರ ದಾಳಿಯು ತೊಂದರೆಯಿತ್ತು. ಈ ರಾಜ್ಯದ ಮೇಲೆ ಸತತಬಾಧನೆಯಿಂದ ಬಾದಶಾಹಿ ರಾಜರು ಸಾಗಿಬಂದುದರಿಂದ ರಾಜ್ಯವು ನಾಮಶೇಷವಾದುದು.

ವಿಜಯನಗರವು ಇಷ್ಟೊಂದು ಅಲ್ಪಾವಧಿಯಲ್ಲಿ ಮೂಡಿ ಮುಳುಗಿದ್ದರೂ, ಅಂದಿನ ಕೆಲವು ರಾಜವರ್ಯರ ಹೆಸರು ಜಗತ್ತಿನಲ್ಲೇ ಪ್ರಖ್ಯಾತವಾಗಿದೆ. ಅವರಲ್ಲಿ ಶ್ರೀ ಕೃಷ್ಣದೇವರಾಯನು 'ನಾಯಕಮಣಿ' ಇವನ ಚರಿತ್ರೆಯನ್ನು ನಿರೀಕ್ಷಿಸುವ ಮೊದಲಾಗಿ ತತ್ಪೂರ್ವಿಕರ ಸಂಗತಿ ಹಿನ್ನೆಲೆಯಾಗುವುದು. ಅದರ ಕೊಂಚ ಪರಿಚಯ ಹೀಗಿದೆ:

ಆಳಿದ ರಾಜರು: ವಿದ್ಯಾರಣ್ಯರಿಂದ ವಿಜಯನಗರವು ಪ್ರವರ್ತಿತವಾಯಿತು. (1336ನೆಯ ಇಸ್ವಿ). ಇದು ಬಳ್ಳಾರಿ ಜಿಲ್ಲೆಯಲ್ಲಿದೆ. ಹುಕ್ಕ, ಬುಕ್ಕರು ಈ ರಾಷ್ಟ್ರದ ಮೊದಲಿಗರಾದರು (ಇಸ್ವಿ 1336–77). ಇಮ್ಮಡಿ ಹರಿಹರ, ಇಮ್ಮಡಿ ಬುಕ್ಕ, ದೇವರಾಯ, ಇಮ್ಮಡಿ ದೇವರಾಯರ ಕಾಲದಲ್ಲಿ ಆ ವೈಭವ ಘನತೆಗಳಿಗೆ ಕೊರತೆಯಾಗಲಿಲ್ಲ (1377—1447).

ಆ ಮೇಲಿನ ಮಲ್ಲಿಕಾರ್ಜುನ, ಒಂದನೆಯ ವಿರೂಪಾಕ್ಷರ ಆಳಿಕೆಯಲ್ಲಿ ಸುತ್ತಲಿನ ಸಾಮಂತರೂ, ಮುಹಮ್ಮದೀಯ ರಾಜರೂ ಕೊಂಚ ಪ್ರಬಲರಾಗಹತ್ತಿದರು 1447—77.. ಇದುವರೆಗೆ ಸಂಗಮ ಮನೆತನದ ರಾಜರು ಆಳಿದರು.

ಸಾಳುವ ವಂಶದ ನರಸಿಂಹನು ತನ್ನ ಆಶ್ರಿತನಾದ ಇಮ್ಮಡಿ ವಿರೂಪಾಕ್ಷನನ್ನು ಉರುಳಿಸಿ, ತಾನೇ ರಾಜನಾದನು. ಈ ಕಾಲದಲ್ಲಿ ಮುಹಮ್ಮದೀಯ ರಾಜರಲ್ಲಿ ಭೇದವುಂಟಾಗಿ, ಬಹಮನೀ ರಾಜ್ಯವು ಐದು ರಾಜ್ಯವಾಗಿ ಒಡೆದುದು. ಇಮ್ಮಡಿ ನರಸಿಂಹನು ಈ ವಂಶದ ಕೊನೆಯ ಅರಸನಾದನು (1496). ಇವನ ಆಶ್ರಿತನಾದ ತೌಳವ ನರಸನು ಇವನನ್ನು ಮೂಲೆಗೊತ್ತಿ, ತಾನೇ ಆಳತೊಡಗಿದನು. ಈ ನರಸನು ತೆಂಕನಾಡಿನ ರಾಜರನ್ನು ಗೆದ್ದು, ವಿಜಯಶ್ರೀಯನ್ನು ಪಡೆದಿದ್ದನು. ಇವನ ಮೂವರು ಮಕ್ಕಳಲ್ಲಿ ಹಿರಿಯ ವೀರನರಸಿಂಹನು ಪಟ್ಟವೇರಿದನು. ಇವನು ರಾಜ್ಯಲೋಭದಿಂದ ತನ್ನ ತಮ್ಮನಾದ ಕೃಷ್ಣದೇವರಾಯನನ್ನು ಕೊಲ್ಲಲು ಹವಣಿಸಿದನು (1504-9). ಆಗಣ ಮಂತ್ರಿಯಾದ ತಿಮ್ಮರಸನು (ಅಪ್ಪಾಜಿಯೆಂದೂ ಹೆಸರು ಇದೆ) ಕೃಷ್ಣರಾಯನನ್ನು ಅಡಗಿಸಿಟ್ಟು, ಕಾಪಾಡಿದನು; ಕೆಲವು ಕಾಲದೊಳಗೆ ಕೃಷ್ಣರಾಯನೇ ರಾಜನಾಗುವಂತೆ ಅಪ್ಪಾಜಿಯು ಯೋಜಿಸಿದನು. ಕೃಷ್ಣರಾಯನೂ ಪಟ್ಟಕ್ಕೆ ಬಂದೊಡನೆ ತನ್ನ ಹಟದಂತೆ ಸೋದರರು ಮತ್ತು ಅವರ ಮಕ್ಕಳನ್ನು ಸೆರೆಯಿಟ್ಟನು. "ಆಶಾಹಿ ಪರಮಂ ದುಃಖಂ"!

ಶ್ರೀ ಕೃಷ್ಣದೇವರಾಯನು ಇಪ್ಪತ್ತು ವರುಷಗಳಲ್ಲಿ ಆಳಿದನು (1509–29). ಇವನು ಪ್ರಾರಂಭದಲ್ಲಿ ವಿಲಾಸಮಯ ಜೀವನದಲ್ಲಿ ಮಗ್ನನಾಗಿದ್ದನೆಂದು, ಅತ್ತ ವಿರೋಧಿಗಳ ತಂಡವು ಪ್ರಬಲವಾಗುತ್ತಿತ್ತೆಂದು, ಒಮ್ಮೆ ತಿಮ್ಮರಸನು ರಾಜನು ಸಿಂಹಾಸನವಿಳಿದು ನಿದ್ರೆಗೆ ಹೋಗುವಾಗ ಕೆನ್ನೆಗೆ ಬಡಿದನೆಂದು, ಆಗ ರಾಜನೀತಿಯನ್ನು ಬೋಧಿಸಿದನೆಂದೂ ಹೇಳುವರು. ತಿಮ್ಮರಸನು ರಾಜದಂಡಕ್ಕೆ ಬಂದ ತಡೆಯನ್ನು ಹೋಗಲಾಡಿಸಿದ ಮಂತ್ರಿವರ್ಯನೆಂದು ತಿಳಿಯಬಹುದು.

ವಿಜಯಗಳು: ರಾಜನು ಸರ್ವಸನ್ನಾಹದಿಂದ ಕೂಡಿ, ರಾಜಧಾನಿಯಿಂದ ದಕ್ಷಿಣ ಸಮುದ್ರದ ವರೆಗೆ ದಂಡಯಾತ್ರೆಯನ್ನು ಕೈಗೊಂಡನು.

ಚೋಳ, ಪಾಂಡ್ಯ, ಕೇರಳದವರನ್ನು ಗೆದ್ದುಕೊಂಡನು. ಸಿಂಹಳದ ರಾಜ ಮನೆತನದ ಅಂತಃಕಲಹದಲ್ಲಿ ಕೃಷ್ಣರಾಯನು 'ಮಧ್ಯಸ್ಥ'ನಾಗಿದ್ದನೆಂದು ತಿಳಿಯುತ್ತದೆ.

ಈ ರಾಜನು ಅಲ್ಲಿಂದ ಮರಳಿ, ಉತ್ತರ-ಪೂರ್ವದಿಕ್ಕಿಗೆ ಸಾಗಿದನು. ವಿಜಾಪುರ ಇಸ್ಮೈಲ್ ಆದಿಲ್‌ಶಾಹನೂ ಕೃಷ್ಣರಾಯನೂ ರಾಯಚೂರಿನ ಬಳಿ ಹೋರಾಡಿದರು. ಅದರಲ್ಲಿ ಈ ರಾಜನೇ ಗೆದ್ದರೂ, ದೂರಾಲೋಚನೆಯಿಂದ ಅಷನೊಂದಿಗೆ ಸಂಧಿಮಾಡಿಕೊಂಡನು.

ಕೃಷ್ಣದೇವರಾಯನು ಕಲಿಂಗದ ವರೆಗೆ ಜೈತ್ರಯಾತ್ರೆ ಮಾಡಿದನು. ತಾನು ಗೆದ್ದ ರಾಜ್ಯಗಳನ್ನು ಆಯಾ ರಾಜರಿಗೆ ಕೊಟ್ಟು, ತನ್ನ ಸಾಮಂತರನ್ನಾಗಿ ಮಾಡಿದುದು ಇವನ ವೈಶಿಷ್ಟ್ಯವೊಂದು. ಹೀಗಾಗಿ ವಿಜಯನಗರದ ಸೀಮೆ ಈತನಿಂದ ವಿಸ್ತಾರಗೊಂಡಿತ್ತು.

ಬಳಗದವರು: ಕೃಷ್ಣರಾಯನು ಆಯಾ ದೇಶದ ರಾಜಪುತ್ರಿಯರನ್ನು ಮದುವೆಯಾದನು. ಇವನಿಗೆ ಹಲವಾರು ರಾಣಿಯರಿದ್ದರು. ಚಿನ್ನಾದೇವಿ, ಅನ್ನಪೂರ್ಣೆ (ಕಮಲೆ), ಜಗನ್ಮೋಹಿನಿ (ತುಕ್ಕಾ), ತಿರುಮಲಾಂಬೆ ಮುಂತಾದವರಲ್ಲಿ ತಿರುಮಲೆಯೇ ಪಟ್ಟದ ರಾಣಿಯಾಗಿದ್ದಳು. ಇವಳಲ್ಲಿ ತಿರುಮಲನೆಂಬ ಮಗನೂ ತಿರುಮಲೆಯೆಂಬ ಮಗಳೂ ಹುಟ್ಟಿದರು.

ರಾಜ್ಯವು ತನ್ನ ಸಂತತಿಯಲ್ಲಿ ಸ್ಥಿರವಾಗಿರಬೇಕೆಂದು ಕೃಷ್ಣರಾಯನೂ ಬಗೆದಿದ್ದನು. ಆರೇಳು ವರ್ಷದ ತಿರುಮಲನಿಗೆ 'ರಾಜಸಮ' ಪಟ್ಟವನು ಕಟ್ಟಲು ಬಯಸಿದನು. ಈ ಬಗೆಗೆ ಅಪ್ಪಾಜಿಯು ಒಪ್ಪಿಲ್ಲವಾದರೂ, ರಾಜನು ಸ್ವಯಂ ಮುಂದಾಳುವಾದನು. ಆದರೆ ಪಟ್ಟವಾಗಿ ಒಂದು ವರುಷದೊಳಗೆ ಬಾಲಕನು ಆಕಸ್ಮಿಕ ಮರಣಕ್ಕೆ ತುತ್ತಾದನು. ರಾಜನು ಮಂಕಾದನು. ಈ ಕೊಲೆಯು ಅಪ್ಪಾಜಿ ಮತ್ತು ಅವನ ಮಕ್ಕಳಿಂದ ನಡೆದಿರಬೇಕೆಂದು ಆಕೋಪವಾಯ್ತು!

ಬಾಲ್ಯದಲ್ಲಿ ತನ್ನ ರಕ್ಷಕನಾದ ತಿಮ್ಮರಸನನ್ನು ಈ ಆರೋಪಕ್ಕಾಗಿ ರಾಜನು ಶಿಕ್ಷಿಸಿದನು. ಮಂತ್ರಿಯ ಕಣ್ಣುಗಳನ್ನು ಕೀಳಿಸಿ, ಜೀವಾಂತ್ಯದ ತನಕ ಸೆರೆಯಿಟ್ಟನು. "ದುರಾಶೆಯ ಮುಂದೆ ಯಾರ ಆಟವೂ ಸಾಗದು!"

ಈಯೆಡೆಗಾಲದಲ್ಲಿ ಮಹಮ್ಮದೀಯರ ದಾಳಿ ಒದಗಿತು. ರಾಜನು ಎಚ್ಚರದಿಂದ ಅದನ್ನು ಪ್ರತಿಭಟಿಸಿದ್ದನು. ಕೃಷ್ಣರಾಯನು ಪುತ್ರಶೋಕ

ದಿಂದ ಒಳಗೊಳಗೆ ಕುದಿಗೊಂಡು, ಕೊನೆಗೆ ವಿರಕ್ತನಾಗಿ, ತಿರುಪತಿಯಲ್ಲಿದ್ದು ಕಾಲಕಳೆದನೆಂದು ಹೇಳುವರು. ಅಲ್ಲಿ ಇವನ ಮತ್ತು ಇಬ್ಬರು ರಾಣಿಯರ ವಿಗ್ರಹಗಳಿವೆ.

ವಿದ್ವತ್ತು: ಕೃಷ್ಣರಾಯನ ರಾಜ್ಯಭಾರದ ಕಾಲದಲ್ಲಿ ಸಂಸ್ಕೃತ, ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲಿ ಅನೇಕ ವಿದ್ವಾಂಸರು ಗ್ರಂಥಗಳನ್ನು ಬರೆದಿದ್ದರು. ಜೈನ, ಬ್ರಾಹ್ಮಣ, ಶೈವ ಕವಿಗಳಿದ್ದರು. ಸ್ವಯಂ ರಾಜನೇ ಆಯ್ದು ಕೃತಿಗಳನ್ನು ವಿರಚಿಸಿದ್ದನು. 'ಅ ಮುಕ್ತ ಮಾಲ್ಯದ' ಎಂಬ ತೆಲುಗುಭಾಷೆಯ ಭಕ್ತಿಕಾವ್ಯವನ್ನು ಇಲ್ಲಿ ಉಲ್ಲೇಖಿಸಬಹುದು. ಇದರಿಂದಾಗಿ 'ಇವನ ಮಾತೃಭಾಷೆ ತೆಲುಗು' ಎಂದು ಕೆಲವರ ಹೇಳಿಕೆಯಿದೆ. ಅದೇ ಗ್ರಂಥದಲ್ಲಿ 'ಕನ್ನಡರಾಯ'ನೆಂದೂ ಶಿಲಾಶಾಸನಗಳಲ್ಲಿ 'ಕನ್ನಡ ರಾಜ್ಯರಮಾರಮಣ'ನೆಂದೂ ಈ ರಾಜನನ್ನು ಹೊಗಳಿದೆ. ಈತನು ಸಂಸ್ಕೃತ, ಕನ್ನಡಗಳಲ್ಲೂ ಬರೆದಿದ್ದಾನೆ. ಇವನು 'ತೌಳವ ವಂಶದವ'ನೆಂದು ಪ್ರಸಿದ್ಧವೇ ಇದೆ. ಈ ಮೇರೆಗೆ 'ಇವನ ತಾಯ್ನುಡಿ ಕನ್ನಡ'ವೆಂದು ತಿಳಿಯುವುದೇ ಸೂಕ್ತವಾಗಿದೆ.

ಕೃಷ್ಣದೇವರಾಯನು ಎಲ್ಲಾ ಮತದವರಲ್ಲಿ ಗೌರವಬುದ್ಧಿಯಿಂದ ಕೂಡಿದ್ದನೆಂದು ಹೊಗಳತಕ್ಕ ಸಂಗತಿಯಾಗಿದೆ. 'ಹಿಂದುರಾಯಸುರತ್ರಾಣ'ವಾದ ಇವನು ತನ್ನ ಸಿಂಹಾಸನದ ಮುಂದುಗಡೆ 'ಕುರಾನ್' ಗ್ರಂಥವನ್ನು ಇರಿಸಿದ್ದನು, ಮುಹಮ್ಮದೀಯರು ಅದಕ್ಕೆ ಬಾಗಿಕೊಂಡರೆ ಸಾಕೆಂದು ಸಾರಿದ್ದನು. ಶೃಂಗೇರಿಯ ಸ್ವಾಮಿಗಳನ್ನು ಆಗಾಗ ಭೇಟಿಯಾಗುತ್ತಿದ್ದನು. ವಿಶಿಷ್ಟಾದ್ವೈತದ ಸ್ವಾಮಿಜಿಯವರಲ್ಲಿ ಹೊಕ್ಕುಬಳಕೆಯಿರಿಸಿದ್ದನು. ಮಾಧ್ವಗುರುಗಳಾದ ವ್ಯಾಸರಾಯರು ರಾಜನ ಪ್ರಾಣರಕ್ಷಕರಾಗಿದ್ದರು, ಒಮ್ಮೆ ರಾಜ್ಯವನ್ನೂ ನಿರ್ವಹಿಸಿದ್ದರು. ಜೈನಗುರುಗಳ ದತ್ತಿ ಕೇಳಿಬರುವುದು. ವೀರಶೈವ ಪಂಡಿತರ ಸನ್ಮಾನಗಳು ನಡೆಯುತ್ತಿದ್ದುವು. ವಿದೇಶದವರು ಬಂದುಹೋಗುತ್ತಿದ್ದರು!

ಕೃಷ್ಣರಾಯನ ಆಳಿಕೆಯಲ್ಲಿ ಹಲವು ದೇವಳಗಳಿಗೆ ಕೊಟ್ಟ ದತ್ತಿಗಳು ಇವೆ. ರಾಜನೇ ದೇವಾಲಯ, ಕೆರೆ, ಗೋಪುರ, ದಿಬ್ಬಗಳನ್ನು ಕಟ್ಟಿಸಿದ್ದನು. ಇದರಿಂದಾಗಿ ವಾಸ್ತುಶಿಲ್ಪ, ಚಿತ್ರಕಲೆ, ಧಾರ್ಮಿಕ ವಿಚಾರಗಳನ್ನೂ ಜನತೆಯಲ್ಲಿ ಬಿತ್ತರಿಸಿದನು. ಪುರಂದರದಾಸರೇ ಮೊದಲಾದ ಸಂತರ ವಾಣಿಯು

ಈತನ ಕಾಲದಿಂದಲೇ ಅಖಂಡವಾಗಿ ಹರಿಯುತೊಡಗಿದುದು. ಈತನ ಆಡಳಿತವು ಸರ್ವತೋಭದ್ರವಾಗಿಯೂ, ಸರ್ವತೋಮಾನ್ಯವಾಗಿಯೂ, ಅತ್ಯಂತ ಘನತೆಯಿಂದಲೂ ಮೆರೆದಿತ್ತು.

ವರ್ಣನೆ: ಪೇಯಸ (Peas)ನೆಂಬ ವಿದೇಶ ಪ್ರವಾಸಿಯೊಬ್ಬನು ಈತನ ಕಾಲದಲ್ಲೇ ವಿಜಯನಗರಕ್ಕೆ ಬಂದಿದ್ದನು (1520 ಇಸ್ವಿ). ಅವನ ವರ್ಣನೆಯಿಂದ ರಾಜಧಾನಿಯ ಪ್ರತಿಸ್ಥಳಗಳು ಖಚಿತವಾಗಿ ತಿಳಿಯಲಾಗುತ್ತಿವೆಯೆನ್ನುವರು. ಆದರ ಕೆಲವು ಮಾತುಗಳನ್ನು ಇಲ್ಲಿ ಉದ್ಧರಿಸುತ್ತೇವೆ:

"ಈ ಪಟ್ಟಣವನ್ನು ನಾನು ಏನೆಂದು ಬಣ್ಣಿಸಲಿ? ಒಮ್ಮೆಯೇ ಇಡೀ ಪಟ್ಟಣವನ್ನು ಕಂಡರಷ್ಟೇ ಇದನ್ನು ನಾನು ಚೆನ್ನಾಗಿ ಬಣ್ಣಿಸಲಾದೀತು. ಆದರೂ ನಾನು ಒಂದು ಗುಡ್ಡವನ್ನೇರಿ ನೋಡಿದೆನು. ಆಗ ನನ್ನ ಕಣ್ಣಿಗೆ ಬಿದ್ದ ಭಾಗವೇ ರೋಮ್ ಪಟ್ಟಣದಷ್ಟು ವಿಶಾಲವೂ ಅತ್ಯಂತ ಮನೋಹರವೂ ಆಗಿದೆ. ಅಲ್ಲಿ ನಿಬಿಡವಾದ ಗಿಡಗಳ ಸಾಲುಗಳು ಅಂದವಾಗಿ ಕಂಡವು. ಅಲ್ಲಲ್ಲಿಗೆ ಅನೇಕ ಸರೋವರಗಳು ಕಂಗೊಳಿಸುತ್ತವೆ. ಅರಮನೆಯ ಸಮೀಪದಲ್ಲಿಯೇ ತೆಂಗಿನ ಬನಗಳೂ, ಫಲಭರಿತವಾದ ತೋಟಗಳೂ ತುಂಬಿವೆ. ಅಲ್ಲಲ್ಲಿಗೆ ನಿರ್ಮಲವಾಗಿ ಹರಿಯುವ ಝರಿಗಳಿಂದಲೂ, ಹಸುರು ಬಳ್ಳಿಗಳಿಂದಲೂ, ಲಿಂಬೆ, ದ್ರಾಕ್ಷಿ, ಕಿತ್ತಳೆ, ಅಂಜೀರು ಮೊದಲಾದ ಫಲವೃಕ್ಷಗಳಿಂದಲೂ ಈ ಪಟ್ಟಣವು ಬಲು ಶೋಭಾಯಮಾನವಾಗಿದೆ.

ಈ ಪಟ್ಟಣದ ಜನಸಂಖ್ಯೆಯು ಅಪರಿಮಿತವಾಗಿದೆ. ವರ್ತಕರು ಮುತ್ತು, ರತ್ನ, ಹವಳ ಮತ್ತು ವಜ್ರಗಳ ವ್ಯಾಪಾರವನ್ನು ಮಿತಿಮೀರಿ ಮಾಡುತ್ತಾರೆ. ಪ್ರತಿ ಶುಕ್ರವಾರಕ್ಕೊಮ್ಮೆ ದೊಡ್ಡ ಸಂತೆಯಾಗುತ್ತದೆ. ಆದರೆ ಪ್ರತಿಯೊಂದು ದಿನವೂ ಬೇರೆ ಬೇರೆ ಬೀದಿಗಳಲ್ಲಿ ಸಂತೆಗಳು ಕೂಡಿಯೇ ಕೂಡುತ್ತವೆ. ಈ ಪಟ್ಟಣದಲ್ಲಿ ಇಂತಹ ಪದಾರ್ಥವು ಸಿಕ್ಕುವುದಿಲ್ಲೆಂದಿಲ್ಲ. ಹಣ್ಣು ಹಂಪಲು ಕಾಯಿಪಲ್ಲೆಗಳ ರಾಶಿಯನ್ನು ನೋಡಿದರೆ ಕಣ್ಣು ತಿರುಗುತ್ತದೆ. ಅಂಗಡಿ ಮುಂತಾದವುಗಳಲ್ಲದೆ ಜನರು ವಾಸಿಸುವ ಮನೆಗಳೇ ಈ ಪಟ್ಟಣದಲ್ಲಿ ಒಂದು ಲಕ್ಷವಿರುತ್ತವೆ. ಈ ರಾಯನು ಇಪ್ಪತ್ತು ಲಕ್ಷ ಸೈನ್ಯವನ್ನು ಕೂಡಿಸಬಲ್ಲನು. ಇವನ ಸೈನಿಕರನ್ನು ನಾನು ನೋಡಿದೆನು. ಆ ಸೈನಿಕರಲ್ಲಿ ಹೇಡಿಯೊಬ್ಬನೂ ನನಗೆ ಕಾಣಲಿಲ್ಲ." (ಶ್ರೀ ವಿದ್ಯಾರಣ್ಯ ಸ್ವಾಮಿಗಳು-ವಾಗ್ಭೂಷಣ ಗ್ರಂಥಮಾಲೆ).